# ಕಾನನ

ಜುಲೈ 2017

ನಿಸರ್ಗದೆಡೆಗೆ ಪಯಣ



BANNERUGHATTA

WILDLIFE
CONSERVATION
GROUP

# ಕಾನನ

ನಿಸರ್ಗದೆಡೆಗೆ ಪಯಣ



ಮುಖಪುಟ

ಹುಲಿ

ಹುಲ್ಲುಗಾವಲಿನಂತ ಅಡ್ಲುಗಳು ಕಾಟಿ, ಕಡವೆ, ಕಾಡುಹಂದಿ, ಸಾರಗ, ಜಿಂಕೆ ಮುಂತಾದವುಗಳ ಬೇಟೆಗೆ ಹುಲಿಗಳಿಗೆ ಹೇಳಿ ಮಾಡಿಸಿದ ಆವಾಸಗಳು ನಮ್ಮ ನಾಡಿನಲ್ಲಿ ಎತ್ತೇಚ್ಚವಾಗಿವೆ, ಅವುಗಳ ಸಂರಕ್ಷಣೆ ನಮ್ಮ ಮುಂದೆ ಇವೆ...!

© ವಿಪಿನ್ ಬಾಳಿಗ

ಜುಲೈ 2017

BANNERUGHATTA WILDLIFE CONSERVATION GROUP



* ಕಾಡಿನ ರಾಜ ಹುಲಿರಾಯ
* ಮಲಗಿರುವ ಹುಲಿ ಹಾಗೆಯೇ ಮಲಗಲಿ...!
* ತುಂಡು ಬಾಲದ ಹುಲಿ..!
* ಉಲ್ಲಾಸ ಕಾರಂತ (ಕವನ)
* ಪ್ರಕೃತಿ ಬಿಂಬ


**ಲೇಖಕ ವೃಂದ**

ಶಶಿಧರಸ್ವಾಮಿ ರು. ಹೀರೆಮಠ

ಅರುಣ್ ಮೆನನ್

ಜೈಕುಮಾರ್ .ಆರ್

ಕಲುಬಿ ಬ್ರದರ್ಸ್

ವಿನೋಂದ್ ಕುಮಾರ್



**ವಿನ್ಯಾಸ**

ಅಶ್ವಥ .ಕೆ.ಎನ್

**ಮುಖಪುಟ ಛಾಯಾಚಿತ್ರ**

ಶಶಿಧರಸ್ವಾಮಿ ರು. ಹೀರೆಮಠ

**ಪರಿಷ್ಕರಣೆ**

ಮುರಳಿ .ಎಸ್

ನಾಗೇಶ್ .ಓ .ಎಸ್

**ಕರಡು ತಿದ್ದುಪಡಿ**


ಡಾ.ದೀಪಕ್ ಭದ್ರಶೆಟ್ಟಿ, ಮೈಸೂರು



© ಅಮಿತ್ ಕೃಷ್ಣ ಬಂಡೀಪುರ ರಾಷ್ಟ್ರೀಯ ಉದ್ಯಾನವನ

ಒಂದು ಹುಲಿ ಬದುಕಲು ಕಾಟಿ, ಕಡವೆ, ಕಾಡುಹಂದಿ, ಸಾರಗ ಮುಂತಾದ 500 ಬಲಿ ಪ್ರಾಣಿಗಳ ಅವಶ್ಯಕತೆ ಇದೆ. ಈ ಬಲಿಪ್ರಾಣಿಗಳು ಬದುಕಲು ದಟ್ಟ ಕಾಡುಗಳು ಬೇಕು. ಶೇಕಡ 93% ರಷ್ಟು ಕಾಡು ಕುಗ್ಗಿದೆ, ಆ ದಟ್ಟ ಕಾಡುಗಳ ಉಳಿವು ನಮ್ಮ ನಿಮ್ಮ ಕೈಯಲ್ಲಿದೆ. ಅಂದರೆ ಒಂದು ಕಾಡಿನಲ್ಲಿ ಹುಲಿಯೊಂದು ಇದೆ ಎಂದರೆ ಆ ಕಾಡು ಸಂಪದ್ಭರಿತವಾಗಿದೆ ಎಂದರ್ಥ. 60ರ ದಶಕದಲ್ಲಿ ನಮ್ಮ ಕರ್ನಾಟಕದ ಕಾಡುಗಳನ್ನು ದಿನವಿಡೀ ಸುತ್ತಿದರೂ ಒಂದೆರಡು ಜಿಂಕೆಗಳು ಕಾಣುತ್ತಿರಲಿಲ್ಲ. ದಕ್ಷ ಸಂರಕ್ಷಣೆಯ ಫಲದಿಂದ ನಮ್ಮ ಕಾಡುಗಳಲ್ಲಿ ಇಂದು ಜಗತ್ತಿನಲ್ಲಿಯೇ ಅತಿ ಹೆಚ್ಚು ಹುಲಿಗಳು ಇವೆ. ಆದ್ದರಿಂದ ನಮ್ಮ ಮಲೆನಾಡಿನ 25,000 ಚದರ ಕಿಲೋಮೀಟರ್ ಅರಣ್ಯ ಹುಲಿಗಳಿಗೆ ಜಗತ್ತಿನಲ್ಲಿಯೇ ಅತಿ ಸೂಕ್ತ ನೆಲೆ ಎಂದು ಹೆಸರುವಾಸಿಯಾಗಿದೆ.

# ಕಾಡಿನ ರಾಜ ಹುಲಿರಾಯ



**(ಜುಲೈ 29 ಅಂತರಾಷ್ಟ್ರೀಯ ಹುಲಿ ದಿನದ ಸಲುವಾಗಿ ವಿಶೇಶ ಚಿತ್ರ-ಲೇಖನ)**

ಕಾಡು ಎಂದರೆ ಅದೊಂದು ವನ್ಯಜೀವಿಗಳು ಸ್ವಚ್ಛಂದವಾಗಿ ವಿಹರಿಸುತ್ತಾ ಬದುಕು ನಡೆಸುವ ತಾಣ. ಈ ಕಾಡಿನಲ್ಲಿ ಪ್ರತಿಯೊಂದು ಜೀವಿಯೂ ತನ್ನದೇ ಆದ ಅಸ್ತಿತ್ವವನ್ನು ಹೊಂದಿದೆ. ಕಾಡಿನ ವೈವಿಧ್ಯಮಯ ಪರಿಸರದಲ್ಲಿ ಹುಲ್ಲಿನಿಂದ ಹಿಡಿದು ದೊಡ್ಡಮರಗಳವರೆಗೂ ಸಸ್ಯ ಸಂಕುಲವಿದೆ, ಈ ಸಸ್ಯ ಸಂಕುಲವನ್ನು ಅವಲಂಬಿಸಿರುವ ಸಸ್ಯಾಹಾರಿ ಪ್ರಾಣಿಗಳು, ಈ ಸಸ್ಯಾಹಾರಿ ಪ್ರಾಣಿಗಳನ್ನು ಅವಲಂಬಿಸಿರುವ ಮಾಂಸಾಹಾರಿ ಪ್ರಾಣಿ ಪ್ರಭೇದಗಳು ಹೀಗೆ ಆಹಾರ ಸರಪಳಿ ನಿಗೂಢವಾಗಿ ಸಾಗುತ್ತದೆ. ಈ ಆಹಾರ ಸರಪಳಿಯಲ್ಲಿ ಪ್ರಮುಖ ಮೇಲ್ವರ್ಗದ ಜೀವಿಯೇ ಹುಲಿ. ಕಾಡುಗಳಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಾ ವಿನಾಶದಂಚಿಗೆ ಸರಿಯುತ್ತಿರುವುದನ್ನು ನೋಡಿ, 2010ರಲ್ಲಿ ರಷ್ಯಾದ ಸೆಂಟ್ ಪೀಟರ್ಸ್‌ಬರ್ಗ್‌ನಲ್ಲಿ ಕಾರ್ಯಾಗಾರ ನಡೆಯಿತು. ಆ ಕಾರ್ಯಾಗಾರದಲ್ಲಿ ಘೋಷಿಸಿದಂತೆ ಪ್ರತಿವರ್ಷ 29 ರಂದು ಅಂತರಾಷ್ಟ್ರೀಯ ಹುಲಿ ದಿನಾಚರಣೆಯನ್ನು ಆಚರಿಸಲಾಗುತ್ತದೆ.

1913ರಲ್ಲಿ ಒಂದುಲಕ್ಷವಿದ್ದ ಹುಲಿಗಳು, ಸಮಯ ಕಳೆದಂತೆ ಅವುಗಳ ಸಂಖ್ಯೆ ಗಣನೀಯವಾಗಿ ಇಳಿದು ಆಹಾರ ಸರಪಳಿಯಲ್ಲಿ ಆತಂಕ ಸೃಷ್ಟಿಸಿತ್ತು. ಭಾರತದಲ್ಲಿಯೂ ಸಹ ಇದೇ ಪರಿಸ್ಥಿತಿ ಮುಂದುವರೆದು 2010 ರ ಹುಲಿಗಣತಿ ಪ್ರಕಾರ 1706 ಹುಲಿಗಳಿದ್ದವು, 2014ರ ಗಣತಿಯಲ್ಲಿ ಹುಲಿಗಳ ಸಂಖ್ಯೆ 2226 ಏರಿಕೆಯಾಗಿರುವುದು ಹೆಮ್ಮೆಯ ವಿಷಯ. ನಮ್ಮ ದೇಶದಲ್ಲಿ ಸುಮಾರು 6000 ಹುಲಿಗಳು ಜೀವಿಸಬಹುದಾದಷ್ಟು ಅರಣ್ಯ ಪ್ರದೇಶವಿದೆ. ಈಗ ಲಭ್ಯವಿರುವ ಗಣತಿಯ ಮಾಹಿತಿ ಪ್ರಕಾರ ಕರ್ನಾಟಕ 406 ಹುಲಿಗಳನ್ನು ಹೊಂದಿ ಮೊದಲ ಸ್ಥಾನದಲ್ಲಿದ್ದರೆ ಉತ್ತರಾಖಂಡದಲ್ಲಿ 340 ಹುಲಿಗಳಿವೆ. ಮದ್ಯಪ್ರದೇಶದಲ್ಲಿ 306 ಹುಲಿಗಳಿವೆ. ಹುಲಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಲು ಪ್ರಮುಖ ಕಾರಣ ಕಾಡುಗಳನ್ನು ಕಡಿದು ಮಾನವ ಕಟ್ಟಡಗಳನ್ನು ನಿರ್ಮಿಸುವುದು, ಮಾನವನೊಂದಿಗೆ ಸಂಘರ್ಷ (ಹುಲಿಗಳ ಉಗುರು, ಚರ್ಮಕ್ಕಾಗಿ ಅವುಗಳನ್ನು ಕಳ್ಳ ಬೇಟೆಯಾಡುವುದು), ಬದಲಾದ ಹವಾಮಾನ.

## ಹುಲಿಗಳ ಬಗ್ಗೆ ಒಂದಿಷ್ಟು ಮಾಹಿತಿ

### ದೇಹದ ಅಂಗ ರಚನೆ:



ಹುಲಿಯನ್ನು ವೈಜ್ಞಾನಿಕವಾಗಿ ಪ್ಯಾಂಥೆರಾ ಟೈಗ್ರಿಸ್ ಎಂದು ಕರೆದು ಸಸ್ತನಿಗಳ ಫೆಲಿಡೇ ಕುಟುಂಭಕ್ಕೆ ಸೇರಿಸಲಾಗಿದೆ. ಇವು ದಕ್ಷಿಣ ಮತ್ತು ಪೂರ್ವ ಏಷ್ಯಾದಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಇದರ ದೇಹ ಸುಮಾರು 4 ಮೀಟರ ಉದ್ದ ಇದ್ದು 300 ಕಿಲೋವರೆಗೂ ತೂಗುತ್ತವೆ. ಹಳದಿ ವರ್ಣದ ಮೈ ಮೇಲೆ ನೀಳವಾಗಿ ಮೇಲಿನಿಂದ ಕೆಳಗಿನವರೆಗೂ ತುಕ್ಕು ಅಥವಾ ಕಂದು ಬಣ್ಣಧ ಪಟ್ಟೆಗಳನ್ನು ಹೊಂದಿವೆ, ಮುಖ ಬಿಳಿ ಬಣ್ಣವನ್ನು ಹೊಂದಿದೆ. ಪಟ್ಟೆಗಳ ಆಕಾರ ಹಾಗೂ ಸಾಂದ್ರತೆಯು ಹುಲಿಗಳ ಜಾತಿಯಿಂದ ಜಾತಿಗೆ ಬದಲಾಗುತ್ತಾ ಹೋಗುತ್ತದೆ. ಹುಲಿಯ ಪಟ್ಟೆಗಳು ನೂರಕ್ಕಿಂತಲೂ ಹೆಚ್ಚು. ಈ ಪಟ್ಟೆಗಳ ವಿನ್ಯಾಸ ಪ್ರತಿ ಹುಲಿಗೂ ವಿಶಿಷ್ಟವಾಗಿದ್ದು ಮಾನವನ ಬೆರಳಚ್ಚಿನಂತೆ ವಿವಿಧ ವಿನ್ಯಾಸಗಳನ್ನು ಹೊಂದಿವೆ, ಹಲವು ಪ್ರಕೃತಿಯ ವಿಸ್ಮಯಗಳಲ್ಲಿ ಇದು ಒಂದು ವಿಸ್ಮಯ.

ಬೇಟೆಗಾಗಿ ಹೊಂಚು ಹಾಕುತ್ತಿರುವಾಗ ಹುಲಿಯು ಸುತ್ತಲಿನ ಪರಿಸರದೊಂದಿಗೆ ಬೆರೆತಂತೆ ಕಾಣುವ ಈ ಪಟ್ಟೆಗಳು ಸಹಾಯಕಾಗಿವೆ ಎಂದು ಒಂದು ವಾದ. ಕಿವಿಯ ಹಿಂಭಾಗದಲ್ಲಿ ದೊಡ್ಡ ಬಿಳಿ ಮಚ್ಚೆ ಇದೆ. ಭುಜ ಹಾಗೂ ಕಾಲುಗಳು ಬಲವಾಗಿ ರೂಪುಗೊಂಡಿದ್ದು ಇವುಗಳ ಸಹಾಯದಿಂದ ಹುಲಿಯು ತನಗಿಂತ ದೊಡ್ಡ ಗಾತ್ರದ ಪ್ರಾಣಿಗಳನ್ನು ಸುಲಭವಾಗಿ ನೆಲಕ್ಕುರುಳಿಸಿ ತನ್ನ ಹರಿತವಾದ ಹಲ್ಲುಗಳಿಂದ ಮಾಂಸವನ್ನು ಹರಿದು ತಿನ್ನಬಲ್ಲದು. ದವಡೆಯು ಬಲವಾಗಿದೆ. ಮೂಗಿನ ಹತ್ತಿರ ಮೀಸೆಗಳಿದ್ದು ಇದರ ಸಹಾಯದಿಂದ ಅತಿಸೂಕ್ಷ್ಮವಾದ ವಾಸನೆಯ ಸಾಮರ್ಥ್ಯವನ್ನು ಹೊಂದಿದೆ. ಹುಲಿಯು ನೀಳವಾದ ಬಾಲವನ್ನು ಹೊಂದಿದೆ. ಅಷ್ಟೇಗಡುಸಾದ ಉಗುರುಗಳ ಪಂಜು ಇದೆ. ನೀಳವಾದ ಶರೀರ ಹೊಂದಿರುವುದರಿಂದ ಹುಲಿಯು ತನ್ನ ಗಾತ್ರದ ಎರಡರಷ್ಟು ದೂರ ನೆಗೆಯ ಬಲ್ಲದು. ಹೆಣ್ಣು ಹುಲಿಯು ಗಾತ್ರದಲ್ಲಿ ಗಂಡು ಹುಲಿಗಿಂತ ಸಣ್ಣದು. ಹುಲಿಯ ಹುಂಕಾರದಿಂದ ಇಡೀ ಕಾಡಿಗೆ ಕಾಡೆ ಗಾಬರಿಗೊಳ್ಳುವುದರ ಜೊತೆ ಅನೇಕ ಖಗ-ಮೃಗಗಳು ಓಡಿ ದಿಕ್ಕಾಪಾಲಾಗಿ ಓಡುತ್ತವೆ.

**ಹುಲಿಯ ಆವಾಸ ನೆಲೆಗಳು:**

ಹಲಿಯ ವಾಸದ ನೆಲೆ ಗಿಡಮರಗಳ ಮರೆಯಿಂದ ನಿರ್ಮಿತವಾಗಿರುವ ಕಾಡು, ನೀರಿರುವ ತೊರೆ ಹಾಗೂ ಯಥೇಚ್ಛವಾಗಿ ಬೇಟೆಪ್ರಾಣಿಗಳಿರುವ ನೆಲೆ, ಹುಲಿ ಎಲ್ಲ ಬಗೆಯ ಅರಣ್ಯ ಪ್ರದೇಶಗಳಲ್ಲಿ ವಾಸಿಸುವುದು ಕಂಡುಬಂದರು ದಟ್ಟವಾದ ಸಸ್ಯರಾಶಿಯ ನೆಲೆಗಳನ್ನು ಹೆಚ್ಚಾಗಿ ಇಷ್ಟ ಪಡುತ್ತವೆ.

**ತನ್ನದೇ ಆದ ಪ್ರಾಂತ್ಯದಲ್ಲಿ:**

ಹುಲಿ ತನ್ನ ಪ್ರಾಂತ್ಯ ಅಥವಾ ಸರಹದ್ದನ್ನು ಸ್ಪಷ್ಟವಾಗಿ ನಿಗಧಿಮಾಡಿಕೊಂಡು ಅದರೊಳಗೆ ಬದುಕುವ ಒಂಟಿಜೀವಿ. ಒಂದು ಪ್ರದೇಶದಲ್ಲಿ ದೊರೆಯುವ ಬೇಟೆ ಮತ್ತು ಗಂಡು ಹುಲಿಗಾದರೇ ಸುತ್ತಲಿನ ಪರಿಸರದಲ್ಲಿ ಇರಬಹುದಾದ ಸಂಗಾತಿಗಳ ಮೇಲೆ ಹುಲಿಯ ಸರಹದ್ದಿನ ವ್ಯಾಪ್ತಿ ನಿರ್ಧಾರವಾಗುತ್ತದೆ. ಸಾಮಾನ್ಯವಾಗಿ ಹೆಣ್ಣು ಹುಲಿಯ ಪ್ರಾಂತ್ಯ 20 ಚ.ಕಿ.ಮೀ. ಆದರೇ ಗಂಡು ಹುಲಿಯ ಪ್ರಾಂತ್ಯ 60 ರಿಂದ 100 ಚ.ಕಿ.ಮೀ ವಿಸ್ತಾರವಾಗಿದ್ದು ಇದು ಹಲವು ಹೆಣ್ಣು ಹುಲಿಗಳ ಪ್ರಾಂತ್ಯವನ್ನು ಸಹ ಒಳಗೊಂಡಿರುತ್ತದೆ. ತಮ್ಮ ಸರಹದ್ದಿನಲ್ಲಿ ಬೇರೆ ಹುಲಿಗಳು ಬಂದಾಗ ಅವುಗಳಲ್ಲಿ ಘೋರ ಹೋರಾಟ ನಡೆಯುವುದುಂಟು. ಕೆಲವು ಸಲ ಗಂಡು ಹುಲಿಗಳ ನಡುವೆ ಹೆಣ್ಣು ಹುಲಿಗಳಿಗಾಗಿ ತೀವ್ರ ಕಾಳಗ ನಡೆದು ಅಶಕ್ತವಾದ ಒಂದು ಗಂಡಿನ ಸಾವಿನೊಂದಿಗೆ ಮುಗಿಯುತ್ತದೆ. ಹುಲಿಗಳು ತಮ್ಮ ಸರಹದ್ದನ್ನು ಗಿಡ-ಮರಗಳ ಮೇಲೆ ಮೂತ್ರವನ್ನು ಸಿಂಪಡಿಸಿ ಗುರುತು ಮಾಡುತ್ತವೆ ಹಾಗೂ ಸೀಮೆಯ ಗಡಿಯುದ್ದಕ್ಕೂ ತನ್ನ ಮಲದಿಂದ ಗುರುತು ಹಾಕಿರುತ್ತವೆ.

**ಆಹಾರ:**



ಹುಲಿಗಳು ಸಾಮಾನ್ಯವಾಗಿ ಹಸಿವಾದಾಗ ಮಾತ್ರ ಕಾಡು ಪ್ರಾಣಿಗಳನ್ನು ಬೇಟೆಯಾಡುತ್ತವೆ. ಕಾಡೆಮ್ಮೆ, ಜಿಂಕೆ, ಕಡವೆ, ಕಾಡು ಹಂದಿ, ಕೋತಿ, ಕಪ್ಪುಮೂತಿಮಂಗ, ಮೊಲ, ನವಿಲು, ಮುಳ್ಳು ಹಂದಿಗಳನ್ನು ಬೇಟೆಯಾಡುತ್ತದೆ. ಬಲಿಯು ಉಸಿರುಗಟ್ಟಿ ಪ್ರಾಣ ಬಿಡುವವರೆಗೂ ಅದರ ಕೊರಳನ್ನು ಕಚ್ಚಿಕೊಂಡೆ ಇದ್ದು ಅದರ ಪ್ರಾಣ ಹೋಗಿ ನಿರ್ಜೀವವಾದ ಮೇಲೆ ತಿನ್ನುತ್ತದೆ. ಹುಲಿಯು ಜಿಂಕೆಯಂತಹ ಓಟಗಾರ ಪ್ರಾಣಿಯನ್ನು 50 ರಿಂದ 65 ಕಿ.ಮೀ ವೇಗದಲ್ಲಿ ಹಿಂಬಾಲಿಸಿ ಬೇಟೆಯಾಡುತ್ತದೆ. ವಯಸ್ಸಾದ ಮುದಿ ಹುಲಿಗಳು ಮತ್ತು ತೀವ್ರ ಗಾಯಗೊಂಡು ಬೇಟೆಯಾಡಲು ಸಾಮರ್ಥ್ಯವಿಲ್ಲದ ಹುಲಿಗಳು ಕೆಲವೊಮ್ಮೆ ನರಭಕ್ಷಕಗಳಾಗುತ್ತವೆ.

### ಅತ್ಯುತ್ತಮ ಈಜುಗಾರ:

ಹುಲಿಯು ಅತ್ಯುತ್ತಮ ಈಜುಗಾರ. ನೀರಿನಲ್ಲಿ ಸರಾಗವಾಗಿ ನಾಲ್ಕು ಮೈಲು ದೂರವನ್ನು ಈಜ ಬಲ್ಲದು. ತನ್ನ ಬೇಟೆಯನ್ನು ಹಲ್ಲುಗಳಲ್ಲಿ ಕಚ್ಚಿ ಹಿಡಿದು ನದಿ ಕೆರೆಗಳನ್ನು ದಾಟುತ್ತವೆ.

### ಸಂತಾನೋತ್ಪತ್ತಿ:

ಹುಲಿಗಳಲ್ಲಿ ಸಂತಾನಾಭಿವೃದ್ಧಿಗಾಗಿ ಋತುವಿನ ಕಾಲಮಿತಿ ಇಲ್ಲದಿದ್ದರೂ ಹುಲಿಗಳ ಪ್ರಣಯಾಚರಣೆಯು ನವೆಂಬರ್ ನಿಂದ ಏಪ್ರಿಲ್ ತಿಂಗಳಲ್ಲಿ ಹೆಚ್ಚು. ಗರ್ಭಧಾರಣೆಯ ಅವಧಿಯು 16 ವಾರಗಳಾಗಿದ್ದು ಒಂದು ಬಾರಿಗೆ 3 ರಿಂದ 4 ಮರಿಗಳನ್ನು ಹೆರುತ್ತದೆ. ನವಜಾತ ಮರಿಯು ಒಂದು ಕಿ.ಗ್ರಾಂ ತೂಕವಿರುತ್ತದೆ. ಹುಟ್ಟಿದಾಗ ಹುಲಿ ಮರಿಗಳು ಕುರುಡಾಗಿದ್ದು ಸಂಪೂರ್ಣ ನಿಸ್ಸಹಾಯಕ ಸ್ಥಿತಿಯಲ್ಲಿರುತ್ತವೆ. ಈ ಮರಿಗಳನ್ನು ಬಂಡೆಗಳ ಕೊರಕಲು ಅಥವಾ ದಟ್ಟ ಪೊದೆಗಳಲ್ಲಿ ಮರೆ ಮಾಡಿ, ಪೋಷಿಸಿ ತಾಯಿ ಹುಲಿಯು ಮರಿಗಳನ್ನು ಬೆಳೆಸುತ್ತದೆ. ಜನಿಸಿದ 8 ವಾರಗಳ ಬಳಿಕ ಮರಿಗಳು ತನ್ನ ತಾಯಿಯನ್ನು ಹಿಂಬಾಲಿಸಿ ಆಹಾರ ಬೇಟೆಯಾಡುವದನ್ನು ಕಲಿಯುತ್ತವೆ ಹಾಗೂ 18 ತಿಂಗಳಲ್ಲಿ ಸ್ವಾವಲಂಭಿಯಾಗಿ ಆಹಾರನ್ವೇಷಣೆಯಲ್ಲಿ ತೊಡಗುತ್ತವೆ. ಎರಡರಿಂದ ಎರಡುವರೆ ವರ್ಷಗಳ ವಯಸ್ಸಿನಲ್ಲಿ ತನ್ನ ತಾಯಿಯನ್ನು ತೊರೆಯುವ ಹುಲಿಮರಿಗಳು ಸ್ವತಂತ್ರವಾಗಿ ಪ್ರಾಂತ್ಯ ರೂಪಿಸಿಕೊಳ್ಳುತ್ತವೆ.



ಹೆಣ್ಣು ಹುಲಿಯು 3 ರಿಂದ 4 ವರ್ಷಗಳಲ್ಲಿ ಲೈಂಗಿಕ ಪ್ರೌಢಾವಸ್ಥೆಯನ್ನು ತಲುಪಿದರೆ, ಗಂಡುಗಳು 4 ರಿಂದ 5 ವರ್ಷಕ್ಕೆ, ಪ್ರೌಢಾವಸ್ಥೆಯನ್ನು ತಲುಪುತ್ತವೆ. ತನ್ನ ಜೀವಿತಾವಧಿಯಲ್ಲಿ ಒಂದು ಹೆಣ್ಣು ಹುಲಿಯು ಸುಮಾರು 15 ರಿಂದ 20 ಮರಿಗಳಿಗೆ ಜನ್ಮ ನೀಡುತ್ತದೆ. ಹಾಗು ಸಾಮಾನ್ಯವಾಗಿ ಗಂಡು ಮತ್ತು ಹೆಣ್ಣು ಮರಿಗಳ ಸಂಖ್ಯೆಯು ಏಕರೂಪವಾಗಿರುತ್ತದೆ.

**ಜೀವಿತಾವಧಿ:**

ಕಾಡಿನಲ್ಲಿಯ ಹುಲಿಗಳು 12 ರಿಂದ 15 ವರ್ಷ ಜೀವಿಸಿದರೆ ಮೃಗಾಲಯದಲ್ಲಿರುವ ಹುಲಿಗಳು 18 ರಿಂದ 20 ವರ್ಷ ಬದುಕುತ್ತವೆ.

**ಮರೆಯಾದ ತಳಿಗಳು:**

ಆಧುನಿಕ ಯುಗದಲ್ಲಿ 8 ಉಪತಳಿಯ ಹುಲಿಗಳಿದ್ದವು ಈಗ ಎರಡು ಉಪತಳಿಗಳು ಭೂಮಿಯಿಂದ ಶಾಶ್ವತವಾಗಿ ಮಾರೆಯಾಗಿವೆ. ಮರೆಯಾದ ಉಪತಳಿಗಳು (1) ಬಾಲಿ ಹುಲಿ: ಇದು ಇಂಡೋನೇಷ್ಯಾದ ಬಾಲಿ ದ್ವೀಪದಲ್ಲಿ ಮಾತ್ರ ಜೀವಿಸಿತ್ತು. ಮಾನವನ ಹುಚ್ಚಿನ ಬೇಟೆಗಾಗಿ ಈ ತಳಿ 1937ರಲ್ಲಿ ಈ ಭೂಮಿಯಿಂದ ಶಾಶ್ವತವಾಗಿ ಮರೆಯಾಯಿತು. (2) ಜಾವಾ ಹುಲಿ-ಇಂಡೋನೇಷ್ಯಾದ ಜಾವಾ ದ್ವೀಪದಲ್ಲಿ ಮಾತ್ರ ಈ ಹುಲಿ ಜೀವಿಸಿತ್ತು, 1980ರ ದಶಕದಲ್ಲಿ ತನ್ನ ದುರಾಸೆಯಿಂದ ಇದನ್ನು ಬೇಟೆಯಾಡಿ ಭೂಮಿಯ ಮೇಲಿಂದ ಅಳಿಸಿಹಾಕಿದ್ದಾನೆ. ಇಂದು ಜೀವಿಸಿರುವ 6 ಉಪತಳಿಗಳೆಂದರೆ ಬಂಗಾಳ ಹುಲಿ (ರಾಯಲ್ ಬೆಂಗಾಲ್ ಟೈಗರ್ ಅಥವಾ ಪ್ಯಾಂಥೆರಾ ಟೈಗ್ರಿಸ್ ಟೈಗ್ರಿಸ್), ಇಂಡೋಚೀನಾ ಹುಲಿ(ಪ್ಯಾಂಥೆರಾ ಟೈಗ್ರಿಸ್ ಕಾರ್ಬೆಟ್ಟಿ), ಮಲಯಾ ಹುಲಿ (ಪ್ಯಾಂಥೆರಾ ಟೈಗ್ರಿಸ್ ಜಾಕ್ಸನ್), ಸುಮಾತ್ರಾ ಹುಲಿ(ಪ್ಯಾಂಥೆರಾ ಟೈಗ್ರಿಸ್ ಸುಮಾತ್ರೇ), ಸೈಬೀರಿಯಾ ಹುಲಿ(ಪ್ಯಾಂಥೆರಾ ಟೈಗ್ರಿಸ್ ಅಲ್ಟೈಕಾ), ದಕ್ಷಿಣ ಚೀನಾ ಹುಲಿ (ಪ್ಯಾಂಥೆರಾ ಟೈಗ್ರಿಸ್ ಅಮೊಯೆನ್ಸಿಸ್) ಇವುಗಳು ಸಹ ವಿನಾಶದತ್ತ ಸಾಗುತ್ತಿದ್ದು ಸಂರಕ್ಷಿಸಬೇಕಾಗಿದೆ.

**ದೇವರ ವಾಹನವಾಗಿ ಹಾಗೂ ಪುರಾಣಗಳಲ್ಲಿ ರಾಜ ಲಾಂಛನವಾದ ರಾಷ್ಟ್ರ ಪ್ರಾಣಿ :**



ಹುಲಿಯು ದುರ್ಗಾದೇವಿಯ ವಾಹನವಾಗಿ ಪೂಜನೀಯ ಸ್ಥಾನ ಪಡೆದಿದೆ. ಅಲ್ಲದೇ ಹರಿಹರ ಸುತನಾದ ಅಯ್ಯಪ್ಪಸ್ವಾಮಿಯು ಹುಲಿಯ ಹಾಲನ್ನು ತರುವುದರೊಂದಿಗೆ ಇದರ ಮೇಲೆ ಏರಿ ಬರುವ ಪ್ರಸಂಗ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಅನೇಕ ರಾಜರುಗಳು ಇದನ್ನು ತಮ್ಮ ರಾಜ ಲಾಂಛನವಾಗಿ ಧ್ವಜಗಳಲ್ಲಿ ಬಳಸಿ ತಮ್ಮ ಪರಾಕ್ರಮ ಮೆರೆದಿದ್ದಾರೆ. ಹುಲಿಯೊಂದಿಗೆ ಹೊರಾಡಿದ ಹೊಯ್ಸಳ ಸಮ್ರಾಜ್ಯದ ಸಳನನ್ನು ಮೆರೆಯಲು ಸಾಧ್ಯವೇ ಇಲ್ಲ, ಇಷ್ಟೆಲ್ಲದರ ಜೊತೆಗೆ ಹುಲಿಯು ನಮ್ಮ ದೇಶದ ರಾಷ್ಟ್ರ ಪ್ರಾಣಿಯಾಗಿದೆ.

**ಸಂರಕ್ಷಣೆಗಾಗಿ ಹುಲಿ ಯೋಜನೆ:**

ಭಾರತದಲ್ಲಿ ಹುಲಿಗಳಿಗೆ ಯೋಗ್ಯವಾದ ಕಾಡು ಸಾಕಷ್ಟು ಪ್ರಮಾಣದಲ್ಲಿ ಇದೆ. ಕ್ಷೀಣಿಸುತ್ತಿರುವ ಹುಲಿಗಳ ಸಂತತಿಯನ್ನು ಸಂರಕ್ಷಿಸಲು 1975ರಲ್ಲಿ ಭಾರತ ಸರ್ಕಾರವು **ಹುಲಿ ಯೋಜನೆ** (ಪ್ರಾಜೆಕ್ಟ್ ಟೈಗರ್) ಎಂಬ


ಮಹತ್ವಾಕಾಂಕ್ಷಯ ಯೋಜನೆಯನ್ನು ಜಾರಿಗೆ ತಂದು ದೇಶಾದಾದ್ಯಂತ 25ಕ್ಕು ಹೆಚ್ಚು ಹುಲಿ ಮೀಸಲು ರಾಷ್ಟ್ರೀಯ ಉದ್ಯಾನವನಗಳನ್ನು ಮಾಡಿತು ಹಾಗೂ ಇವುಗಳ ವ್ಯಾಪ್ತಿಯಲ್ಲಿ ಮಾನವ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಷೇಧಿಸತು. ಇದು ಬರೀ ಹುಲಿ ಸಂರಕ್ಷಣೆಗೆ ಮಾತ್ರ ಸೀಮಿತವಾಗಿರದೇ ಅಲ್ಲಿರುವ ಇತರೇ ವನ್ಯಜೀವಿಗಳು, ಜೈವಿಕ ಜೀವ ಜಾಲವಾದ ಸಸ್ಯಗಳನ್ನು ಸಂರಕ್ಷಿಸಲು ಸಹಾಯಕಾರಿಯಾಗಿದೆ.

ಹುಲಿಗಳಿರುವ ಈ ಅರಣ್ಯಗಳು ಜೀವ ವೈವಿಧ್ಯದ ಅಮೂಲ್ಯ ನಿಕ್ಷೇಪವಾಗಿದ್ದು, ಲಕ್ಷಾಂತರ ಪ್ರಭೇದಗಳ ಸಸ್ಯ, ಕೀಟ, ಉಭಯವಾಸಿ, ಸರೀಸೃಪ, ಪಕ್ಷಿ ಮತ್ತು ಸಸ್ತನಿಗಳಿಗೆ ಆಶ್ರಯ ನೀಡುದೆ. ಈ ಜೀವರೂಪಗಳು ವಿಕಾಸಗೊಳ್ಳಲು ಲಕ್ಷಾಂತರ ವರ್ಷಗಳು ಗತಿಸಿವೆ. ಈ ಸಸ್ಯ ಹಾಗೂ ಪ್ರಾಣಿಗಳ ಮಧ್ಯದ ಅವಲಂಬನೆ ಬಗ್ಗೆ ನಾವು ತಿಳಿದುಕೊಂಡಿರುವುದು ಬಹಳ ಕಡಿಮೆ. ಒಂದು ಪ್ರಭೇದ ಕಣ್ಮರೆಯಾದರೇ ಉಳಿದ ಜೀವ ಪ್ರಭೇದದ ಮೇಲೆ ಯಾವ ರೀತಿ ಪರಿಣಾಮ ಬೀರಿ ಕಾಲಾಂತರದಲ್ಲಿ ಭೂಮಿಯ ಮೇಲೆ ನಡೆಯುವ ನಮ್ಮ ವಿನಾಶಕ್ಕೆ ನಾವೇ ನಾಂದಿ ಹಾಡಿದಂತ್ತಾಗುತ್ತದೆ, ಅದುದರಿಂದ ನಾವು ಈಗಲಾದರೂ ಎಚ್ಚೆತ್ತುಕೊಂಡು ಹುಲಿಗಳ ಕಳ್ಳಬೇಟೆ ಹಾಗೂ ಅರಣ್ಯ ನಾಶ ಎರಡನ್ನು ತಡೆದು ಸಕಲ ಜೀವಸಂಕುಲದ ಆಹಾರ ಸರಪಳಿಯನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯ.



**ಶಶಿಧರಸ್ವಾಮಿ.ರು.ಹಿರೇಮಠ**
ವನ್ಯಜೀವಿ ಛಾಯಾಗ್ರಾಹಕರು ಹಾಗೂ ನಿಸರ್ಗ ಲೇಖಕರು
ಕದರಮಂಡಲಗಿ, ಹಾವೇರಿ ಜಿಲ್ಲೆ.





# ಮಲಗಿರುವ ಹುಲಿ ಹಾಗೆಯೇ ಮಲಗಲಿ...!

ಮಲಗಿರೋ ಹುಲಿಯನ್ನ ಎಬ್ಬಿಸಿದ್ರೇ ಏನಾಗುತ್ತೆ ? ಎಂದಾದರೂ ನೀವು ಪ್ರಯತ್ನ ಮಾಡಿದ್ದೀರ...? ನಾವು ಕೆಲವು ತಿಂಗಳುಗಳ ಹಿಂದೆ ಈ ತರಹದ ಸನ್ನಿವೇಶವನ್ನು ದಕ್ಷಿಣ ಭಾರತದ ಒಂದು ಕಾಡಿನಲ್ಲಿ ಎದುರಿಸಬೇಕಾಗಿ ಬಂದಿತು.

ಅಂದು ನಾವು, (ಅಂದರೆ ನಾನು, ಅನಂತ, ಕಾರ್ತಿಕ್ ಹಾಗೂ ಇಬ್ಬರೂ NGO ಸದಸ್ಯರೊಂದಿಗೆ) ಕ್ಯಾಮರಾ ಟ್ರ್ಯಾಪ್ ಕೆಲಸದ ನಿಮಿತ್ತ ಆ ಕಾಡಿಗೆ ಅತಿಥಿಗಳಾಗಿದ್ದೆವು. ಬೆಳಗ್ಗೆ ಎದ್ದು ನಾವು ಕಾಡಿನ ಕಡೆ ಹೊರಡುವಷ್ಟರಲ್ಲೇ ಸೂರ್ಯ ಚುರುಕು ಮುಟ್ಟಿಸುವಷ್ಟು ಮೇಲಕ್ಕೆ ಬಂದಿದ್ದ. ಸೂರ್ಯನ ಕೆಂಗಣ್ಣಿನಿಂದ ತಪ್ಪಿಸಿಕೊಳ್ಳಲು ನಾವು ಆದಷ್ಟು ಮರಗಳ ನೆರಳು ಇರುವ ದಾರಿಯನ್ನೇ ಆಯ್ಕೆ ಮಾಡಿಕೊಂಡು ಕ್ಯಾಮರಾಗಳು ಇರುವಲ್ಲಿಗೆ ಪಯಣ ಬೆಳೆಸಿದೆವು. ನಮ್ಮ ಕೆಲಸ ಕ್ಯಾಮರದಲ್ಲಿರುವ ಫೋಟೋಗಳನ್ನು ನಕಲು ಮಾಡಿಕೊಂಡು ಕ್ಯಾಮರಾದಲ್ಲಿನ ಬ್ಯಾಟರೀಗಳನ್ನು ಬದಲಾಯಿಸಿ ಬರುವುದಾಗಿತ್ತು. ಬೆಳಗ್ಗೆ ಕ್ಯಾಮರಾಗಳು ಇರುವಲ್ಲಿಗೆ ಹೋಗುವ ದಾರಿಗಳಲ್ಲಿ ಹುಲಿಗಳ ಚಲನವಲನಗಳ ಕುರುಹುಗಳನ್ನು ಕಂಡು ಹೆಜ್ಜೆ ಗುರುತುಗಳ ಮೇಲೆ ಹುಲಿಯ ಗಾತ್ರ ಎಷ್ಟು?, ಗುರುತು ಎಷ್ಟು ಹಳೆಯದು? ಎಂದೆಲ್ಲಾ ಚರ್ಚಿಸುತ್ತಾ ಕ್ಯಾಮರಾ ಇರುವಲ್ಲಿಗೆ ಬಂದು ತಲುಪುವಷ್ಟರಲ್ಲಿ ಸೂರ್ಯ ನೆತ್ತಿಯ ಮೇಲೆ ಧಗಧಗನೆ ಉರಿಯುತ್ತಿದ್ದ.

ನಾವು ಬಂದ ಕ್ಯಾಮರಾ ಟ್ರ್ಯಾಪ್ ಕೆಲಸವನ್ನು ಮುಸಿಗಿಕೊಂಡು ಪಕ್ಕದಲ್ಲಿಯೇ ಹರಿಯುತ್ತಿದ್ದ ನದಿಯ ಇಂಪಾದ ನಾದವನ್ನು ಆಲಿಸುತ್ತಾ ಅಲ್ಲೇ ಪಕ್ಕದಲ್ಲಿದ್ದ ಮರದ ಕೆಳಗೆ ಕುಳಿತು ವಿಶ್ರಮಿಸಿದೆವು. ಸ್ವಲ್ಪ ಸಮಯದ ನಂತರ ಹೊರಡಲು ಸನ್ನದ್ಧರಾದ ಎಲ್ಲರಿಗೂ "ನದಿಯ ಪಕ್ಕವೇ ಹೋಗೋಣ ಸಾಕಷ್ಟು ಮರಗಳು ಇರುವುದರಿಂದ ನೆರಳೂ ಇರುತ್ತೆ,  ನಮ್ಮತ್ರ ಸಾಕಷ್ಟು ಸಮಯನೂ ಇರೋದ್ರಿಂದ ನಿಧಾನಕ್ಕೂ ಹೋಗಬಹುದು" ಎಂದೆ, ಎಲ್ಲರೂ ನನ್ನ ಮಾತಿಗೆ ಒಪ್ಪಿ ನದಿಯ ದಡದಲ್ಲಿಯೇ ಹೊರಡಲು ಮುಂದಾದರು.




ನನ್ನ ಗೆಳೆಯ ಶಣ್ಮುಗಂ NGO ಸದಸ್ಯರೊಬ್ಬರನ್ನೊಡಗೂಡಿ ಮುಂದೆ ಸಾಗುತ್ತಿದ್ದರೆ ನಾನು, ಕಾರ್ತಿಕ್, ಅನಂತು ಮತ್ತೊಬ್ಬ NGO ಸದಸ್ಯರೊಂದಿಗೆ ಅವರನ್ನು ಹಿಂಬಾಲಿಸುತ್ತಿದ್ದೆವು. ಬೇಸಿಗೆ ಕಾಲವಾದ್ದರಿಂದ ಕಾಡಿನ ಸಾಕಷ್ಟು ಮರಗಳು ಎಲೆ ಉದುರಿಸಿಕೊಂಡು ನಡೆಯುವ ದಾರಿಯನ್ನು ಒಣ ಎಲೆಗಳ ಹಾಸಿಗೆಯಾಗಿಸಿದ್ದವು. ಎಲ್ಲರಿಗೂ ಮೊದಲೇ ಕಾಡಿನಲ್ಲಿ ನಡೆದು ಅಭ್ಯಾಸವಿದ್ದುದ್ದರಿಂದ ಹಾಗೂ ವನ್ಯಮೃಗಗಳ ಸೂಕ್ಷ್ಮತೆ ಬಗ್ಗೆ ಅರಿವಿದ್ದುದರಿಂದ ಎಲ್ಲರೂ ತುಂಬಾ ಜಾಗರೂಕತೆಯಿಂದ ಸ್ವಲ್ಪವೂ ಶಬ್ಧಮಾಡದಂತೆ ನಿಧಾನವಾಗಿ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ನಡೆಯುತ್ತಿದ್ದೆವು. ನಾವೆಷ್ಟು ಜಾಗರೂಕರಾಗಿದ್ದರೂ ಹೆಜ್ಜೆಗಳಿಗೆ ಸಿಗುತ್ತಿದ್ದ ಸಣ್ಣ ಸಣ್ಣ ಕಡ್ಡಿ, ಎಲೆಗಳ ಶಬ್ಧವೇ ಸಾಕಾಗುತ್ತಿತ್ತು ಪಕ್ಕದಲ್ಲಿರುವ ಮೀನುಗಿಡುಗಗಳಂತಹಾ ಪಕ್ಷಿಗಳನ್ನು ಹೆದುರಿಸಲು. ಈ ಹದ್ದು ವಿಶಾಲವಾದ ಬಾನಿಗೆ ದುಮುಕಿದಾಗಲೇ ನಮಗೆ ಹದ್ದಿನ ಇರುವಿಕೆ ತಿಳಿದದ್ದು. ನಮ್ಮ ಇಂದ್ರಿಯಗಳು ಕಾಡಿನಲ್ಲಿ ಎಷ್ಟೇ ಜಾಗರೂಕವಾಗಿದ್ದರೂ ಒಮ್ಮೊಮ್ಮೆ ಪಕ್ಕದಲ್ಲಿರುವ ಜೀವಿಗಳನ್ನು ಕಂಡುಹಿಡಿಯಲು ಸಹಾ ಆಗುವುದಿಲ್ಲ ಅಷ್ಟು ಗೌಪ್ಯವಾಗಿ ಎಷ್ಟೋ ಜೀವಿಗಳೂ ಬದುಕುತ್ತಿರುವುದು ಪ್ರಕೃತಿದತ್ತ ವಿಸ್ಮಯ. ನಮ್ಮ ಗಮನಿಸುವ ಶಕ್ತಿ ಹೆಚ್ಚಿದಂತೆಲ್ಲಾ ಕಾಡಿನ ಜೀವಿಗಳ ರಹಸ್ಯ ತಿಳಿಯುತ್ತಾ ಹೋಗುತ್ತೇವೆ, ಹೀಗೆ ಹಾರಿದ “ಮೀನುಗಿಡುಗ”ವನ್ನು ನಮ್ಮ ಕ್ಯಾಮರಾಗಳಲ್ಲಿ ಸೆರೆಹಿಡಿಯುತ್ತ ಮುಂದೆ ಸಣ್ಣ ಸಣ್ಣ ಕಡ್ಡಿಗಳನ್ನೂ ತುಳಿಯದೆ ಸಾಗಬೇಕೆಂದು ಇನ್ನೂ ಎಚ್ಚರ ವಹಿಸಿ ನಮ್ಮ ನಡುಗೆಯನ್ನು ಮುಂದುವರಿಸಿದೆವು ಆದರೂ ನಮ್ಮ ಅತೀ ಸಣ್ಣ ಶಬ್ಧಗಳು ಮೀನುಗೂಬೆ, ಉಡ ಹಾಗೂ ಒಂದು ಹಾವನ್ನೂ ಹೆದರಿಸುವಲ್ಲಿ ಯಶಸ್ವಿಯಾದವು.




ಎಲ್ಲಾ ಜೀವಿಗಳು ಕಂಡ ಕ್ಷಣಾರ್ಧದಲ್ಲಿಯೇ ಮಾಯವಾದವು. ನಮ್ಮೆಲ್ಲರ ಬಳಿಯೂ ಕ್ಯಾಮರಾಗಳು ಇದ್ದುದ್ದರಿಂದ ಅಯ್ಯೋ ಒಳ್ಳೇ ಫೋಟೋತೆಗೆಯಲಾಗಲಿಲ್ಲವಲ್ಲ...! ಎಷ್ಟು ಬೇಗ ಮಾಯವಾದವು ಎಂದು ನಿರಾಶೆಗೊಂಡು ಮುಂದುವರಿದೆವು. ದಾರಿ ಸಾಗುತ್ತ ನಮ್ಮೊಂದಿಗಿದ್ದ NGO ಸದಸ್ಯರಲ್ಲೊಬ್ಬರು ಇದ್ದಕ್ಕಿದ್ದಂತೆ ತಟಸ್ಥನಾಗಿ ಮೆಲುಧ್ವನಿಯಲ್ಲಿ "ನಿಂತ್ಕೊಳಿ".....! ಎಂದರು. ಎತ್ತಕಡೆಯೋ ನೋಡುತ್ತಾ ಬರುತ್ತಿದ್ದ ನಾನು ಇವರ ಸಣ್ಣ ಧ್ವನಿಯನ್ನ ಗಮನಿಸದ ಅವನಿಗೆ ಡಿಕ್ಕಿ ಹೊಡೆಯುವಷ್ಟು ಹತ್ತಿರಕ್ಕೆ ಬಂದುಬಿಟ್ಟಿದ್ದೆ, ಎಷ್ಟು ಹತ್ತಿರಕ್ಕೆ ಬಂದಿದ್ದೆನೆಂದರೆ ಅವನು ಹುಲಿ...! ಹುಲಿ...! ಎಂದು ಮೆಲುಧ್ವನಿಯಲಿ ಹೇಳಿದ್ದನ್ನು ಕೇಳಿದ ನನಗೆ ಝುಂಗಾಭಲ ಚಂಗನೆ ಹಾರಿ ಹೋದಂತಾಯಿತು. ಆದರೂ ಧೈರ್ಯ ಮಾಡಿ ಎಲ್ಲಿ ಎಂದೆ. ಅಲ್ಲಿ ನದಿ ದಡದಲ್ಲಿ ಎಂದ, ಅವರ ಧ್ವನಿಗೆ ನದಿಯ ಅತ್ತ ದಡದಲ್ಲೆಲ್ಲಾ ಕಣ್ಣಲ್ಲಿ ಕಣ್ಣೀಟ್ಟು ಹುಡುಕಿದರೂ ಎಲ್ಲಿಯೂ ಪಟ್ಟೆಯ ದೇಹ ಕಾಣಲಿಲ್ಲ "ಇಲ್ಲೇ ಇತ್ತೇನೋ ಮುಂದೆ ಹೋಗಿರಬೇಕು" ಎಂದ. "ಎಲ್ಲಿ ಕಾಣ್ತಾನೆ ಇಲ್ಲಾ" ಎಂದಿದ್ದಕ್ಕೆ ಅವರು ನಮ್ಮ ಕಾಲ ಬುಡದಲ್ಲಿ ಕೈ ಮಾಡಿ ತೋರಿಸಿದರೂ ಹುಲಿ ನಾವು ನಿಂತಿದ್ದ ದಡದಲ್ಲಿಯೇ ನಮಗೆ ಬೆನ್ನು ತೋರಿಸುತ್ತಾ 20-25ಅಡಿ ದೂರ ಬಂಡೆಯ ಮೇಲೆ ಮಲಗಿತ್ತು. ಇಷ್ಟು ಹತ್ತಿರದಲ್ಲಿ ಹುಲಿಯನ್ನ ಕಂಡ ನನಗೆ ಕರುಳು ಬಾಯಿಗೆ ಬಂದಂತಾಯ್ತು...!, ತಲೆ ಕೂದಲೆಲ್ಲ ಚಂಗನೆ ನಿಂತವು, ಬಾಯಿ ಎಲ್ಲಾ ಒಣಗಿ ದೇಹವೆಲ್ಲಾ ಬೆವೆತು ಒದ್ದೆಯಾಯಿತು ಕಣ್ಣೆಲ್ಲಾ ಮಂಜುಗಟ್ಟಿದಂತಾಗುತ್ತಿತ್ತು, ಆದರೂ ಉಳಿದಿದ್ದ ಸ್ವಲ್ಪ ಧೈರ್ಯವನ್ನು ಒಟ್ಟುಗೂಡಿಸುತ್ತಾ ಕಣ್ಣುಜ್ಜಿಕೊಂಡೂ ಕಾಣ್ಣಾಡಿಸಿದೆ ನಮ್ಮ ಮುಂದೆ ಶಣ್ಮುಗಂ ಅವನ ಸಹಚರರು ಮರದ ಪಕ್ಕದಲ್ಲೆ ಹುಲಿಗೆ ಕಾಣದಂತೆ ಮರೆ

ಮಾಚಿಕೊಂಡು ನಿಂತಿದ್ದರು ಇನ್ನು ಉಳಿದ ನಾವು ನಾಲ್ವರು ಯಾವ ಮರೆಯೂ ಕಾಣದೆ ಬಯಲಲ್ಲೇ ನಿಂತಿದ್ದೆವು, ಇನ್ನು ಇಲ್ಲೇ ಹೆಚ್ಚು ಹೊತ್ತು ಉಳಿದರೆ ನಮಗೆ ಉಳಿಗಾಲವಿಲ್ಲ ಎಂದು ಅರಿತ ನಾವು ಹುಲಿ ಏಳುವಷ್ಟರಲ್ಲಿ ಅವರು ನಿಂತಿದ್ದ ಮರದಡಿಗೆ ಹೋಗೋಣ ಎಂದು ನಿಧಾನವಾಗಿ ಚಪ್ಪಲಿ ಬಿಚ್ಚಿ ಕೈಯಲಿ ಹಿಡಿದುಕೊಂಡು ಶಬ್ಧಮಾಡದಂತೆ ಹಜ್ಜೆಯ ಮೇಲೆ ಹೆಜ್ಜೆ ಇಡಲಾರಂಭಿಸಿದೆವು. ಆದರೂ ಅವರು ನಿಂತಿದ್ದ ಮರ ನಮ್ಮಿಂದ ದೂರ ಇದೆ ಎನಿಸಿತು. ನಿಧಾನವಾಗಿ ಸ್ವಲ್ಪವೂ ಶಬ್ಧಮಾಡದಂತೆ ನಾನು ಮರದ ದಪ್ಪನೆಯ ಬೇರಿನ ಬಳಿ ಬಂದು ಆ ಬೇರನ್ನೇ ಮರೆ ಮಾಡಿಕೊಂಡು ಕುಳಿತು ಕ್ಯಾಮರಾ ತೆಗೆದು ಒಂದು ಫೋಟೋ ಕ್ಲಿಕ್ಕಿಸಿದೆ ಎರಡನೆಯದು ಇನ್ನೇನು ಕ್ಲಿಕ್ಕಿಸಬೇಕು ಎನ್ನುವಷ್ಟರಲ್ಲಿ ಮಲಗಿದ್ದ ಹುಲಿರಾಯ ಆಶ್ಚರ್ಯದಿಂದ ತನ್ನ ಕತ್ತನ್ನೆತ್ತಿ ನನ್ನತ್ತ ಒಂದು ನೋಟ ಬೀರಿದ್ದೇ ತಡ ನನಗೆ ಮನಸಿನಲ್ಲೇ ಇಲ್ಲಿಗೆ ನನ್ನ ಕಥೆ ಅಷ್ಟೆ ನಾನು ಅದರ ನಿದ್ದೆಗೆ ಭಂಗತಂದಿದ್ದೀನಿ ನನ್ಮೇಲೆ ಪಕ್ಕಾ ಎರಗುತ್ತೇ ಅಯ್ಯೋ ಫೋಟೋಯಾಕದ್ರೂ ತೆಗೆದೆನೋ ಶಟ್ಟರ್ ನ ಶಬ್ಧಕ್ಕೇ ಇದ್ದಿರಬೇಕು ಎಂದು ನನ್ನನ್ನು ಬೈದುಕ್ಕೊಳ್ಳುತ್ತಿರುವಾಗಲೇ ನನ್ನ ಭಯ ಇಮ್ಮಡಿಗೊಂಡಿತ್ತು, ನನ್ನ ಪ್ಯಾಂಟ್ ಒದ್ದೆ ಆಗದಿರಲು ಒಂದೇ ಕಾರಣ ನನ್ನ ದೇಹದಲ್ಲಿದ್ದ ನೀರೆಲ್ಲ ಬೆವೆತು ಖಾಲಿಯಾಗಿದ್ದರಿಂದ.




ಕತ್ತೆತ್ತಿದ್ದ ಹುಲಿಯು ಸುಮ್ಮನೆ ಸುತ್ತಲೂ ಒಮ್ಮೆ ಕಣ್ಣಾಯಿಸಿ ಆಕಳಿಸಿ ಮತ್ತೆ ಮಲಗಲು ರೆಡಿಯಾಯಿತು! ಇದನ್ನು ಕಂಡ ನಾನು ಅಬ್ಬಾ! ಹುಲಿ ನಿದ್ದೆಮೂಡ್ನಲ್ಲಿದೆ ಇಲ್ಲಾ ಅಂದಿದ್ರೆ ನನ್ನ ಕಥೆ ಅಷ್ಟೆ ಎಂದು ಧೈರ್ಯಮಾಡಿ ನಾನು ಕುಳಿತಿದ್ದ ಜಾಗ ಸೇಫ್ ಅಲ್ಲ ಎಂದು ಶಣ್ಮುಗಂ ನಿಂತ್ತಿದ್ದ ಮರದ ಪಕ್ಕದಲ್ಲಿನ ಬುಡದಡಿಗೆ ಹೋದೆನು. ನನ್ನ ಜಾಗವನ್ನು ಕಾರ್ತಿಕ್ ಆಕ್ರಮಿಸಿಕೊಂಡು ಹುಲಿಯ ಕಡೆ ಕ್ಯಾಮರಾವನ್ನು ಹಿಡಿದೆನು. ನಾನು ನಿಂತಿದ್ದ ಜಾಗದಿಂದ

ಹುಲಿ ಇನ್ನೂ ಸ್ಪಷ್ಟವಾಗಿ ಕಾಣುತಿತ್ತು ಹಾಗೂ ಹಿಂದಿನ ಜಾಗಕ್ಕಿಂತ ಸುರಕ್ಷಿತವಾಗಿದ್ದರಿಂದ ನಾನು ಧೈರ್ಯವಾಗಿ ಮನಃ ಪೂರ್ತಿ ಫೋಟೋಗಳನ್ನು ಕ್ಲಿಕಿಸಿದೆ, ನಮ್ಮ ಕ್ಯಾಮರಾಗಳ ಶಬ್ಧ ಹುಲಿರಾಯನ ನಿದ್ದೆಗೆ ಭಂಗ ತಂದಿತೋ ಏನೋ ಎದ್ದುನಿಂತ ಹುಲಿರಾಯ ನಮ್ಮ ಕಡೆ ಒಮ್ಮೆ ನೋಡಿ ನಿಧಾನವಾಗಿ ಮೈಮುರಿದು ನಡೆಯುತ್ತಾ ಮುಂದೆ ಇದ್ದ ಕಾಡಿನಲ್ಲಿ ಲೀನವಾಯಿತು.

ನಮಗೆಲ್ಲರಿಗೂ ಆ ಕ್ಷಣವನ್ನು ಅರಗಿಸಿಕೊಳ್ಳಲು ಸುಮಾರು ಸಮಯ ಬೇಕಾಯಿತು. ಅಷ್ಟರಲ್ಲಿ ದೂರದಲ್ಲಿ ಕೂಗುತ್ತಿದ್ದ ಮುಸುವಗಳ ಕೂಗು ನಮಗೆ ಹುಲಿ ಬಹಳಷ್ಟು ದೂರದಲ್ಲಿದೆ ಎಂದು ಖಾತರಿಪಡಿಸಿದವು. ಎಲ್ಲರೂ ಆ ಸನ್ನಿವೇಶದಿಂದ ಹೊರಬಂದಿದ್ದರಿಂದ ಹುಲಿ ಮಲಗಿದ್ದ ಜಾಗವನ್ನ ಪರೀಕ್ಷಿಸಲು ಹೊರಟೆವು ಹುಲಿಯು ಮಲಗಿದ್ದ ಜಾಗದಿಂದ ಇಪ್ಪತ್ತು-ಮೂವತ್ತು ಪರ್ಲಾಂಗು ದೂರದಲ್ಲೇ ಒಂದು ಕಾಟಿಯ ಅರ್ಧ ಉಳಿದಿದ್ದ ದೇಹವನ್ನು ಕಂಡು ಇದನ್ನು ತಿಂದ ಹುಲಿ ಆರಾಮಾಗಿ ವಿರಮಿಸುತ್ತಿತ್ತು, ಅದಕ್ಕೇ ಇನ್ನೂ ಎಲ್ಲರೂ ಜೀವಂತವಾಗಿದ್ದೇವೆಂದು ಮಾತನಾಡಿಕೊಳ್ಳುತ್ತಾ ನಮ್ಮ ದಾರಿ ಹಿಡಿದೆವು. ದಾರಿಯಲ್ಲಿ ಎಲ್ಲರು ಹುಲಿರಾಯನಿಗೆ ನಮ್ಮ ಸಣ್ಣ ಸಣ್ಣ ಶಬ್ಧಗಳು ಕೇಳಿಸಿವೆಯೋ ಇಲ್ಲವೋ ಎಂದು ಚರ್ಚಿಸುತ್ತಾ ಸಾಗುತ್ತಿದ್ದೆವು ನಾನು ನಿಂತಿದ್ದ ದಿಕ್ಕಿನಿಂದ ಗಾಳಿಯು ಹುಲಿಯ ಕಡೆ ಬೀಸುತ್ತಿದ್ದರಿಂದ ಅದಕ್ಕೆ ನಮ್ಮ ವಾಸನೆ ಸಿಕ್ಕಿರಬಹುದು ಎಂದು, ಅಂತು ನಾವು ಹುಲಿಯನ್ನು ಕಂಡ ಕ್ಷಣದಿಂದ ಹುಲಿಯು ನಮ್ಮನ್ನು ನೋಡುವ ಕಾಲಾವಧಿಯು ನನ್ನ ಜೀವಮಾನದ ರೋಮಾಂಚನ ಕ್ಷಣವಾಗಿದೆ.





ಕನ್ನಡಕ್ಕೆ: ವಿಜಯ ವರ್ಧನ .ಸಿ
ಹಾಸನ ಜಿಲ್ಲೆ.
ಆಂಗ್ಲಬಾಷೆ : ಅರುಣ್ ಮೆನನ್



# ತುಂಡು ಬಾಲದ ಹುಲಿ..!

ಆ ದಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ನನ್ನ "ಚಿಣ್ಣರ ವನದರ್ಶನ" ಕಾರ್ಯಕ್ರಮದ ಮೊದಲ ದಿನ. ಅಂದೇ ನಮಗೆ ಅಲ್ಲಿನ Wildlife SOS ಸಂಸ್ಥೆ ನಡೆಸುವ "ಕರಡಿ ಪುನರ್ವಸತಿ ಕೇಂದ್ರ (Bear Rescue Centre)"ಕ್ಕೆ ಭೇಟಿ ನೀಡುವ ಅವಕಾಶ ದೊರಕಿತು. 'ಕರಡಿ ಕುಣಿತ' ಎಂಬ ಪದ್ಧತಿಗೆ ಸಿಲುಕಿ ನರಳುತಿದ್ದ ಕರಡಿಗಳನ್ನು ತಂದು ಅವುಗಳ ಯೋಗ ಕ್ಷೇಮ ನೋಡಿಕೊಳ್ಳುವ ಕೇಂದ್ರ ಇದಾಗಿತ್ತು. ಆಗ ಅಲ್ಲಿನ ಕರಡಿಗಳನ್ನು ಕಂಡ ನನಗೆ ಮೂಡಿದ ಮೊದಲ ಪ್ರಶ್ನೆ, ಈ ಕರಡಿಗಳನ್ನು ಕರಡಿ ಕುಣಿತದಿಂದ ರಕ್ಷಿಸಿದ ನಂತರ ಮತ್ತೆ ಅರಣ್ಯಕ್ಕೆ ಏಕೆ ಬಿಡುವುದಿಲ್ಲ?.

ಅದಕ್ಕೆ ಅವರ ಉತ್ತರ, "ಈ ಕರಡಿಗಳು ಚಿಕ್ಕಂದಿನಿಂದಲೇ ಮನುಷ್ಯರ ಜೊತೆ ಬೆಳೆದು ತಮ್ಮ ಬೇಟೆಯಾಡುವ ಹಾಗೂ ಆಹಾರ ಹುಡುಕಿ ತಿನ್ನುವ ಸಾಮರ್ಥ್ಯವನ್ನೆಲ್ಲ ಕಳೆದುಕೊಂಡಿರುತ್ತವೆ, ಆದರಿಂದ ಇವು ಕಾಡಿನಲ್ಲಿ ಹೆಚ್ಚು ಕಾಲ ಉಳಿಯಲಾರವು", ಎಂಬ ಅವರ ಈ ಉತ್ತರ ಸರಿಯೆನಿಸಿದರೂ, ನನಗೆ ಏಕೋ ಈ ವನ್ಯಜೀವಿಗಳು ತಮ್ಮ ಆವಾಸ ಮತ್ತು ಸ್ವತಂತ್ರವನ್ನು ಕಳೆದುಕೊಂಡು ಬದುಕಿರುವಷ್ಟು ಕಾಲ ಹೀಗೆ ಬಂಧಿಯಾಗಿರಬೇಕು ಎಂಬುದು ಜೀರ್ಣಿಸಿಕೊಳ್ಳಲು ಸ್ವಲ್ಪ ಕಷ್ಟವೇ ಆಯಿತು.

ಆದರೆ ಇದೀಗ ಬಂದ ಸುದ್ದಿಯಲ್ಲಿ, ಇದೇ ತರಹ ಚಿಕ್ಕಂದಿನಲ್ಲಿ WCS Russia ಸಂಸ್ಥೆಯಿಂದ ರಕ್ಷಿಸಲ್ಪಟ್ಟ "ಝೊಲುಶ್ಕ" (ರಶಿಯನ್ ಭಾಷೆಯಲ್ಲಿ ಝೊಲುಶ್ಕ ಎಂದರೆ 'ಸಿಂಡ್ರೆಲ್ಲಾ') ಎಂಬ ಸೈಬಿರೀಯನ್ ಹುಲಿಯನ್ನು ಸುಮಾರು 20 ತಿಂಗಳುಗಳ ನಂತರ ಕಾಡಿಗೆ ಮರಳಿಸಲಾಯಿತು. ಅದು ಈಗ ಸ್ವಾಭಾವಿಕವಾಗಿ ಅಲ್ಲಿಗೆ ಹೊಂದಿಕೊಂಡು ಎರಡು ಮರಿಗಳಿಗೆ ತಾಯಿಯಾಗಿರುವುದು ಕ್ಯಾಮರ ಕಣ್ಣಿನಲ್ಲಿ ಸೆರೆಯಾಗಿವೆಯಂತೆ. ಆದರೆ ಕ್ಯಾಮರಗೆ ಸಿಕ್ಕ ಹುಲಿಯೇ ಝೊಲುಶ್ಕ ಎಂದು ನಿಖರವಾಗಿ ಹೇಳುವುದು ಹೇಗೆ?



ಅದು ತುಂಬಾ ಸುಲಭ ಎನ್ನುತ್ತಾರೆ 'ಜೊನಾತನ್ ಸ್ಲಘ್ತ್ (Jonathan Slaght), ಇವರು WCSನ ಯೋಜನಾ ವ್ಯವಸ್ಥಾಪಕರು (Project Manager). ಝೊಲುಶ್ಕಳನ್ನು ಮೂರು ಅಂಶಗಳಿಂದ ಗುರುತಿಸಬಹುದು, ಒಂದು ಅವಳ 'ತುಂಡು ಬಾಲ', ಇವಳನ್ನು ನಾಲ್ಕು ತಿಂಗಳ ವಯಸ್ಸಿನಲ್ಲಿ ರಕ್ಷಿಸಿದ್ದಾಗ ಇವಳ ಬಾಲವೂ ತುಂಡಾಗಿತ್ತು. ಅದರಿಂದ ಅಲ್ಲಿನ ಸುತ್ತ ಮುತ್ತ ಯಾವುದೇ ದೊಡ್ಡ ಹೆಣ್ಣು ಹುಲಿಯಿದ್ದರೆ ಅದು ಝೊಲುಶ್ಕ ಎಂದು ಗುರುತಿಸಬಹುದು. ಅದಲ್ಲದೆ ಎಲ್ಲಾ ಹುಲಿಗಳ ಮೈಮೇಲಿನ ಪಟ್ಟೆಗಳ ರಚನೆಯ ಮೇಲೆ ಹುಲಿಗಳನ್ನು ಗುರುತಿಸಬಹುದು. ಈ ಪಟ್ಟೆಗಳು ಹುಲಿಗಳ 'ಬೆರಳಚ್ಚು' ಎಂದೇ ಹೇಳಬಹುದುದು. ನಮ್ಮ ಬೆರಳಚ್ಚು ಹೇಗೆ ಒಬ್ಬೊಬ್ಬರಿಗೂ ಬೇರೆ ಬೇರೆ ಇರುತ್ತದೆಯೋ, ಹಾಗೆ ಹುಲಿಗಳ ಮೇಲಿನ ಈ ಪಟ್ಟೆಗಳು ಒಂದೊಂದು ಹುಲಿಗೂ ವಿಭಿನ್ನವಾಗಿರುತ್ತವೆ. ಪಟ್ಟೆಗಳಿಂದ ಇದು ಝೊಲುಶ್ಕ ಎಂದು ಖಚಿತಪಡಿಸಬಹುದು ಎನ್ನುತ್ತಾರೆ ಜೊನಾತನ್.

ರಷ್ಯಾಯಾದ ಯಾವುದೋ ಹಳ್ಳಿಗಾಡಿನಲ್ಲಿ ರಕ್ಷಿಸಿದ್ದ ಝೊಲುಶ್ಕಳನ್ನು ಮನುಷ್ಯರ ಒಡನಾಟದಿಂದ ದೂರವೇ ಇಡಲಾಯಿತು. ಏಕೆಂದರೆ ಅದು ಮನುಷ್ಯರೊಂದಿಗೆ ಸಂಪರ್ಕ ಹೊಂದಿದಷ್ಟು ಅವುಗಳ ಒಡನಾಟ ಹಾಗೂ ಚಟುವಟಿಗೆಗಳು ಜನರಿರುವ ಪ್ರದೇಶಗಳಲ್ಲಿ ನಡೆಯಬಹುದು, ಇದು ಅಷ್ಟು ಆರೋಗ್ಯಕರವಲ್ಲ. ಅಷ್ಟೇ ಅಲ್ಲದೆ, ಝೊಲುಶ್ಕಳಿಗೆ ಬದುಕಿದ್ದ ಪ್ರಾಣಿಯನ್ನೇ ಆಹಾರವಾಗಿ ನೀಡುವುದರಿಂದ ಅವಳ ಬೇಟೆಯಾಡುವ ಗುಣವು ಉಳಿಸಿದಂತಾಗುತ್ತದೆ. ಈ ಕಾರಣಗಳಿಂದಲೇ ಝೋಲುಶ್ಕಾ ಅವಳ ತನವನ್ನು ಉಳಿಸಿಕೊಂಡು 2 ಮರಿಗಳಿಗೆ ತಾಯಿಯಾಗಿರುವುದು.

ನಮ್ಮ ದೇಶದಲ್ಲಿನಂತೆಯೇ ಸೈಬಿರೀಯನ್ ಹುಲಿಗಳ ಸಂಖ್ಯೆ ಚಿಂತಾಜನಕ ಸ್ಥಿತಿಯಲ್ಲಿತ್ತು. ದಶಕದ ಹಿಂದೆ ಕೇವಲ 420 ಇದ್ದಂತಹ ಇವುಗಳ ಸಂಖ್ಯೆ ಈಗ 540 ಏರಿರುವುದು ಸಂತೋಷದ ಸಂಗತಿಯೇ ಸರಿ. ಝೋಲುಶ್ಕಾಳ ಈ ಉದಾಹರಣೆಯು ಇಡೀ ಪ್ರಪಂಚದಲ್ಲಿಯೇ ಅಳಿವಿನ ಅಂಚಿನಲ್ಲಿರುವ ಎಷ್ಟೋ ಜೀವಿಗಳ ಸಂಖ್ಯೆಯನ್ನು ಸ್ವಾಭಾವಿಕವಾಗಿ ಹೆಚ್ಚಿಸಬಹುದು ಎಂಬುದಕ್ಕೆ, ಮೊಟ್ಟಮೊದಲ ನಿದರ್ಶನವಾಗಿದೆ! ಹಾಗೆಯೇ ಈ ಉದಾಹರಣೆಯು, ಈ ಹಿಂದೆ ಹೇಳಿದಂತೆ ಕರಡಿಯ ವಿಚಾರದಲ್ಲಿ ತುಸು ಬೇಸರವಾಗಿದ್ದ ನನಗೆ, ಸಂತೋಷವನ್ನುಂಟುಮಾಡಿರುವುದಂತೂ ಖಚಿತ..!



**ಉಲ್ಲೇಖಗಳು:**

1. ಚಿಣ್ಣರ ವನದರ್ಶನ - ಕರ್ನಾಟಕ ಅರಣ್ಯ ಇಲಾಖೆ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ನಡೆಸುವ ಎರಡು ದಿನದ, "ಅರಣ್ಯ ಜಾಗೃತಿ ಶಿಬಿರ".


2. WCS - Wildlife Conservation Society.

ಮೂಲ ಲೇಖನ: ScienceNews *for* Students



**- ಜೈಕುಮಾರ್. ಆರ್**

**WCG-ಬೆಂಗಳೂರು**



ಈ ಕೆಳಗಿನ ಸಾಲುಗಳನ್ನು, ವನ್ಯಜೀವಿ ಸಂರಕ್ಷಣೆಯಲ್ಲಿ ನಮಗೆ ಸ್ಪೂರ್ತಿಯಂತಿರುವ ಉಲ್ಲಾಸ ಕಾರಂತ ಇವರಿಗೆ ಅರ್ಪಿಸುತ್ತಿದ್ದೇವೆ.

# ಉಲ್ಲಾಸ ಕಾರಂತ

ಹುಲಿಯ ಎಣಿಕೆಮಾಡಿದ್ಯಲ್ಲೊ ಕಾರಂತನೇ
ಹಗಲು-ಇರುಳು ಏಕ ಮಾಡಿ
ಹುಲಿಯ ಜಾಡು ಬಿಡದ ಹಾಗೆ ||ಪ||

ಮಲ-ಮೂತ್ರ, ಹೆಜ್ಜೆಗಳನ್ನು ಎಲ್ಲ ಲೆಕ್ಕಮಾಡಿ
ಅಜ್ಞಾನದಿ ಜಗವು ಮೂರನಾರು ಎಂದು ಹೇಳುತಿರಲು ||೧||

ಹುಲಿಯಮೇಲ ಪಟ್ಟೆ ಒಂದನೊಂದು ಎಂದು ಹೊಲದೆಂದು
ಚಿತ್ರ ತೆಗೆದು ಸಾಕ್ಷಿಸಹಿತ ನಿರೂಪಿಸಿದ ಮಹಾ ಜ್ಞಾನಿ ||೨||

ಪಟ್ಟೆಗಳ ಜೊತೆ, ವಂಶವಾಹಿಗಳ ಬಿಡಿಸಿ ತೋರಿ
ವ್ಯಾಘ್ರನರಿಯಲು ಹೊಸ ಭಾಷ್ಯ ಬರೆದ ಮಹಾ ಯೋಗಿ ||೩||

ನಿನ್ನ ಕಾಡನೆಲ್ಲ ಸುಟ್ಟು, ಮಟ್ಟಹಾಕಬಂದ
ದುಷ್ಟ ಜನರನೆಲ್ಲ ದಿಟ್ಟತನದಿ ಮೆಟ್ಟಿನಿಂತ ವೀರ ನೀನು ||೪||

ನೀನೆರೆದ ಸುಜ್ಞಾನವಿಂದು, ವ್ಯಾಘ್ರನನ್ನು ರಕ್ಷಿಸುತ
ವನ್ಯಜಗವು ಮರಳಿ ಉತ್ತುಂಗವನ್ನು ಕಾಣುತಿರಲು ||೫||

ಬರಲೆಮಗೆ ಛಲ, ಬಲ ನಿನ್ನಂತೆ ಶಿವರಾಮ ಸುತ
ಬಾಳುವಂತಾಗಲಿ ನಾವು ವನ್ಯಸಂತತಿಯ ಪೊರೆಯುತ ||೬||

- ಕಲುಬಿ ಬ್ರದರ್ಸ್

ಶಿವಮೊಗ್ಗ ಜಿಲ್ಲೆ

# ಪ್ರಕೃತಿ ಬಿಂಬ



© ವಿನೋಂದ್ ಕುಮಾರ್

ಇಂದು ಈ ಭೂಮಿಯ ಮೇಲೆ ಮನುಷ್ಯನು ಸೇರಿಸಿ ಜೀವಿಗಳು ಬದುಕಿದ್ದಾವೆ ಎಂದರೆ ಅದು ಈ ಅಳಿದುಳಿದಿರುವ ಕಾಡುಗಳಿಂದ ಮಾತ್ರ...! ಈ ಕಾಡುಗಳಿದ್ದರೆ ಮಾತ್ರ ನಮಗೆಲ್ಲ ನೀರು..! ಈ ಕಾಡು-ಕಣಿವೆಗಳ ನಾಶದಿಂದ ಇಂದು ಮಳೆ ಇಲ್ಲದೆ ವನ್ಯಜೀವಿ, ಸಸ್ಯಸಂಕುಲ ಕೊನೆಗೆ ಅನ್ನ ನೀಡುವ ರೈತರು ಕೂಡ ಬರದ ಛಾಯೆಯ ಕಡೆಗೆ ಬಂದಿದ್ದಾರೆ...!



© ವಿನೋದ್ ಕುಮಾರ್

ಈ ಛಾಯಾಚಿತ್ರದಲ್ಲಿನ ನದಿ, ದಟ್ಟ ಕಾಡು ನೋಡಲು ಸುಂದರವಾಗಿ ಕಂಡರು... ಮನುಷ್ಯರಾದ ನಾವು ಬೆಟ್ಟದಷ್ಟು ಸಮಸ್ಯೆಗಳನ್ನು ಹುಟ್ಟುಹಾಕಿದ್ದೇವೆ, ಅದನ್ನೆಲ್ಲ ಸಮಸ್ಯೆಯೇ ಇಲ್ಲವೆಂಬಂತೆ ಸುಂದರ ಜೀವನವನ್ನು ಮಾಡುತ್ತಿರುವ ವನ್ಯಜೀವಿಗಳು ನಮಗೆ ಯಾವತ್ತು ತೊಂದರೆ ಮಾಡಿಲ್ಲ...!



© ವಿನೋಂದ್ ಕುಮಾರ್

ಈಗ ಜುಲೈ ತಿಂಗಳು ಕಾಲಿರಿಸಿದೆ ಕಾಡಿನ ಜೀವನದಲ್ಲಿ ಬದಲಾವಣೆ ತರುತ್ತಿದೆ. ಈ ಬಣ್ಣ ಬಣ್ಣದ ಮೋಡಗಳು ಚದುರಿ ಕಪ್ಪುಮೋಡಗಳಿಂದ ಆವೃತ್ತಗೊಂಡು ಮಳೆಯನ್ನು ತರಿಸುತ್ತದೆ. ಕಾಡುಗಳು ಹಸಿರುಗೊಂಡು ಸಿಂಗರಿಸಲು ಈ ಮುಂಗಾರು ಮಳೆ ಜೀವಕ್ಕೆ ಚೈತನ್ಯ ತುಂಬುವ ದೈವಶಕ್ತಿಯೂ ಕೂಡ.



© ವಿನೋಂದ್ ಕುಮಾರ್

ಇಂದು ನಾವು ಕಾಡು ಪ್ರಾಣಿಗಳನ್ನು ನೋಡಬೇಕಾದರೆ...! ಎಲ್ಲಿ ಮನುಷ್ಯನಿಗೆ ಯೋಗ್ಯವಲ್ಲದ ಬೆಟ್ಟ-ಗುಡ್ಡ, ನದಿ-ಕಣಿವೆ ಮುಂತಾದ ಭೂಮಿ ಇದೆಯೋ ಅತಂಹ ಜಾಗಗಳನ್ನು ಮಾತ್ರ ಇಂದು ನಾವು ಕಾಡುಗಳಿಗೆ ಮೀಸಲಿರಿಸಿದ್ದೇವೆ. ಅಂತಹ ಅಳಿದುಳಿದಿರುವ ಕಾಡುಗಳಲ್ಲಿ ಮತ್ತು ಅಭಯಾರಣ್ಯಗಳಲ್ಲಿ ಮಾತ್ರ ವನ್ಯಜೀವಿಗಳನ್ನು ನೋಡಲು ಸಾಧ್ಯ.